International Journal of Leading Research Publication (IJLRP)

E-ISSN: 2582-8010 ● Website: www.ijlrp.com ● Email: editor@ijlrp.com

# ಕಲ್ಯಾಣ ಕರ್ನಾಟಕದ ದಲಿತ ಹಾಗೂ ಬಂಡಾಯ ಸಾಹಿತ್ಯಾವಲೋಕನ

**ಡಾ.ಸಿ. ಟಿ. ಜಯಣ್ಣ**

ಸಹ ಪ್ರಾಧ್ಯಾಪಕರು,

ಕನ್ನಡ ವಿಭಾಗ,

ಎಸ್ ಜೆ ಎಂ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಿ ಡಿ ರಸ್ತೆ . ಚಿತ್ರದುರ್ಗ, ಕರ್ನಾಟಕ ರಾಜ್ಯ, ಭಾರತ

**ಸಾರಾಂಶ:**

ಕಲ್ಯಾಣ ಕರ್ನಾಟಕದ (ಹೈದರಾಬಾದ್-ಕರ್ನಾಟಕ) ದಲಿತ-ಬಂಡಾಯ ಸಾಹಿತ್ಯವು ಪ್ರಾದೇಶಿಕ ಅಸಮಾನತೆ, ಹೈದರಾಬಾದ್ ನಿಜಾಮರ ಹಾಗೂ ಜೀತಪದ್ಧತಿಯ ಶೋಷಣೆ, ಮತ್ತು ತೀವ್ರ ಜಾತಿ ಪದ್ಧತಿಯ ವಿರುದ್ಧದ ದನಿಯಾಗಿದೆ. ಈ ಸಾಹಿತ್ಯವು ಶೋಷಿತರ ನೋವು, ಸಾಂಸ್ಕೃತಿಕ ಪ್ರತಿರೋಧ ಮತ್ತು ಸಾಮಾಜಿಕ ಪರಿವರ್ತನೆಯ ಆಶಯಗಳನ್ನು ಬಿಂಬಿಸುವ ಮೂಲಕ ಕನ್ನಡ ಸಾರಸ್ವತ ಲೋಕದಲ್ಲಿ ಹೊಸ ಚಳುವಳಿಗೆ ನಾಂದಿ ಹಾಡಿದೆ. ಪ್ರಸ್ತುತ ಲೇಖನವು ದಲಿತ ಮತ್ತು ಬಂಡಾಯ ಸಾಹಿತಿಗಳು ಹಾಗೂ ಚಿಂತಕರು ಹೋರಾಟದ ಹಾದಿಗಳ ಹಿನ್ನೆ ಸಾಹಿತ್ಯವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

**ಪ್ರಮುಖ ಪದಗಳು:** ಸಾಹಿತ್ಯ ಚರಿತ್ರೆ, ಕನ್ನಡ ಸಾಹಿತ್ಯ, ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯ, ದಲಿತ ಸಂಘಟನೆ

**೧. ಪ್ರಸ್ತಾವನೆ:**

ಆಧುನಿಕ ಕನ್ನಡ ಸಾಹಿತ್ಯದ ಈಚಿನ ಹಂತ. ನವೋದಯ, ಪ್ರಗತಿಶೀಲ, ನವ್ಯಗಳ ಅನಂತರದ ಸಾಹಿತ್ಯ ಚಳವಳಿ. ಇದನ್ನು ನವೋತ್ತರ ಸಾಹಿತ್ಯವೆಂದೂ ಕರೆಯಲಾಗಿದೆ. ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ ಕನ್ನಡ ಸಾರಸ್ವತ ಪ್ರಪಂಚದಲ್ಲಿ ಕೇಳಿಬರುತ್ತಿರುವ, ಎಲ್ಲ ಪ್ರಗತಿಪರ ಹಾಗೂ ದಲಿತ ಬರಹಗಾರರಿಂದ ಸೃಷ್ಟಿಯಾಗುತ್ತಿರುವ ಸಾಹಿತ್ಯ. ಸಿದ್ದಲಿಂಗಯ್ಯ, ದೇವನೂರ ಮಹಾದೇವ, ವಿ.ಮುನಿವೆಂಕಟಪ್ಪ, ಮೊದಲಾದವರು ದಲಿತ ಸಾಹಿತ್ಯಕ್ಕೆ ಸಂವೇದನೆಯೊಂದಿಗೆ ಕಾವ್ಯ, ಕಥೆ, ಕಾದಂಬರಿಯನ್ನು ಜನರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದರು. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಹುಟ್ಟಿದ ಬಂಡಾಯ ಸಾಹಿತ್ಯದೊಂದಿಗೆ ದಲಿತ ಸಾಹಿತ್ಯ ಒಂದಾಗಿ ಹೋಯಿತು. ಒಂದೇ ನಾಣ್ಯದ ಎರಡು ಮುಖಗಳಾಗಿ ಹೊರಬಂದು ಸಮಾಜಮುಖಿ ಚಿಂತನೆಯಲ್ಲಿ ತೊಡಗಿತು. ದಲಿತ ಸಂವೇದನೆ, ಮಹಿಳಾ ಸಂವೇದನೆ, ಮುಸ್ಲಿಂ ಸಂವೇದನೆ, ಗ್ರಾಮೀಣ ಸಂವೇದನೆ ಇಲ್ಲಿ ಏಕಕಾಲಕ್ಕೆ ರಚನೆಗೊಂಡಿತು. ಇದರಿಂದಾಗಿ ಇದುವರೆಗೂ ಯಾರು ಮುಖ್ಯ ವಾಹಿನಿಗೆ ಬರಲಿಲ್ಲವೋ ಅವರೆಲ್ಲರೂ ಏಕಕಾಲಕ್ಕೆ ಮುಖ್ಯ ವಾಹಿನಿಗೆ ಬಂದಿದ್ದು, ದಲಿತ -ಬಂಡಾಯ ಸಾಹಿತ್ಯದ ವೈಶಿಷ್ಟ್ಯವಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶ ಹತ್ತು ಹಲವು ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಗೆ ನಾಂದಿ ಹಾಡಿದೆ. ಇಲ್ಲಿಯ ದಲಿತ ಮತ್ತು ಬಂಡಾಯ ಸಾಹಿತ್ಯಕ್ಕೆ ಒಂದು ಹೊಸ ಮಾರ್ಗ ಸೂಚಿಸಿದೆ. ಅದಕ್ಕೆ ಶ್ರೀವಿಜಯನ ಕವಿರಾಜಮಾರ್ಗ, ಶರಣರ ಪಚನಗಳು, ದಾಸರ ಕೀರ್ತನೆಗಳು, ತತ್ವಪದಕಾರರ ಮತ್ತು ಸೂಫಿಗಳ ಅನುಭವ ಸಾಹಿತ್ಯ ಸೇರಿ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ದಲಿತ-ಬಂಡಾಯದ ಆಶಯಗಳು ಬೇರೂರಿರುವುದು ಕಾರಣ. ಹೈದರಾಬಾದ್ ಸಂಸ್ಥಾನದ ನಿಜಾಮನ ಆಳ್ವಿಕೆಯಿಂದ ಕನ್ನಡ ಭಾಷೆ ಮುಗಿಲ ಮಲ್ಲಿಗೆಯಾಗಿತ್ತು ಉರ್ದು, ಮೋಡಿ, ಹಿಂದಿ, ಇಂಗ್ಲಿಷ್ ಭಾಷೆ ಜೊತೆಗೆ ಮರಾಠಿ ತೆಲುಗು ಮಿಶ್ರಣದೊಂದಿಗೆ ಉರ್ದು ಪ್ರಾಬಲ್ಯ ಹೊಂದಿತು. ಇಂತಹ ನೆಲದಲ್ಲಿ ನವೋದಯ, ಪ್ರಗತಿಶೀಲ, ನವ್ಯ ಕಾಲಘಟ್ಟದಲ್ಲಿ ಸಾಹಿತ್ಯ ರಚನೆ ಮಾಡಿದ್ದು ಒಂದು ಪವಾಡವೆಂದು ಕರೆಯಬೇಕು.

1979ರಲ್ಲಿ ಧರ್ಮಸ್ಥಳದಲ್ಲಿ ನಡೆದ 51ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕವಿ ಪ್ರೊ.ಎಂ.ಗೋಪಾಲಕೃಷ್ಣ ಅಡಿಗರು ಆಯ್ಕೆಯಾಗಿದ್ದರು. ಆ ಹೊತ್ತಿಗೆ ದಲಿತ ಗೋಷ್ಠಿಯನ್ನು ಆಯೀಜಿಸಬೇಕೆಂದು ರಾಯಚೂರಿನಿಂದ ಡಾ.ಚನ್ನಣ್ಣ ವಾಲಿಕಾರ, ಬೋಳಬಂಡೆಪ್ಪ ಜಂಬಣ್ಣ ಅಮರಚಿಂತ ಒತ್ತಾಯಿಸಿದರು. ಆಗ 'ಕನ್ನಡ ಸಾಹಿತ್ಯದಲ್ಲಿ ದಲಿತ, ಬಲಿತ, ಕಲಿತ ಎನ್ನುವುದು ಇಲ್ಲ ಎಂಬ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರ ಹೇಳಿಕೆ ಎಲ್ಲರನ್ನೂ ಕೆರಳಿಸಿತು. ಆಗ ಧರ್ಮಸ್ಥಳದಲ್ಲಿ ನಡೆಯುತ್ತಿದ್ದ ಸಮ್ಮೇಳನದ ದಿನವೇ ಬೆಂಗಳೂರಿನಲ್ಲಿ ಪರ್ಯಾಯ ಸಾಹಿತ್ಯ ಸಮ್ಮೇಳನವನ್ನು ನೆಡಸಲಾಯಿತು. ಆ ಸಂದರ್ಭದಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಲು ಪ್ರಾರಂಭವಾಯಿತು. ಡಾ.ಚನ್ನಣ್ಣ ವಾಲಿಕಾರ ಅವರ ಈ ಕಾರ್ಯ ಮುಂದೆ ಪೊ.ಬರಗೂರು ರಾಮಚಂದ್ರಪ್ಪ. ಸಿದ್ದಲಿಂಗಯ್ಯ ದೇವನೂರ ಮಹಾದೇವ, ಚಂದ್ರಶೇಖರ ಪಾಟೀಲ, ಕಾಳೇಗೌಡ ನಾಗವಾರ, ಅಲ್ಲಮಪ್ರಭು ಬೆಟ್ಟದೂರು, ಅಗ್ರಹಾರ ಕೃಷ್ಣಮೂರ್ತಿ, ಡಿ.ಆರ್.ನಾಗರಾಜ್ ಮೊದಲಾದ ಸಾಹಿತಿಗಳು, ಪ್ರಗತಿಪರ ಲೇಖಕರು, ಜಾತಿ, ವರ್ಗ, ವರ್ಣ, ಲಿಂಗ ತಾರತಮ್ಯವಿಲ್ಲದೆ ಏಕಕಾಲಕ್ಕೆ ಬಂಡಾಯ ಸಾಹಿತ್ಯ ಮತ್ತು ಚಳವಳಿಗೆ ನಾಂದಿ ಹಾಡಿದರು.

ಡಿ.ಆರ್‌ನಾಗರಾಜ ಅವರು ಖಡ್ಗವಾಗಲಿ ಕಾವ್ಯ ಎಂದರೆ, ಕಾಳೇಗೌಡ ನಾಗವಾರ ಅವರು ಜನರ ನೋವಿಗೆ ಮಿಡಿಯುವ ಪ್ರಾಣ ಮಿತ್ರ ಎಂದು ಸೇರಿಸಿದರು. ಆಗ 'ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ' ಎಂಬ ಘೋಷ ವಾಕ್ಯದೊಂದಿಗೆ ಬಂಡಾಯ ಸಾಹಿತ್ಯ ಸಂಘಟನೆ ರೂಪುಗೊಂಡು ಕರ್ನಾಟಕದಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಸಂಚಲನ ಮೂಡಿಸಿತು.

ಆಗಾಗಲೇ 1973ರಲ್ಲಿ ಬಿ.ಬಸಲಿಂಗಪ್ಪ ಅವರ ಕನ್ನಡ ಸಾಹಿತ್ಯದಲ್ಲಿ ಬೂಸಾ ಪ್ರಕರಣ ಮುನ್ನೆಲೆಗೆ ಬಂದಿತ್ತು ಅಂದಿಗೆ ಕರ್ನಾಟಕದ ಎಲ್ಲ ದಲಿತ ಸಾಹಿತ್ಯ ಮುನ್ನೆಲೆಗೆ ಬರಲು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳು ಪ್ರೇರಣೆಯಾದವು. ಆ ಹೊತ್ತಿಗಾಗಲೇ ಬೀದರದಲ್ಲಿ ಶೇರ್-ಎ-ದಖ್ಖನ್ ಎಂಬ ಬಿರುದನ್ನು ಪಡೆದ ಬಿಶಾಮಸುಂದರ ಭೀಮಸೇನೆ ಪ್ರಚಾರದಲ್ಲಿತ್ತು ಕರ್ನಾಟಕದ ಭದ್ರಾವತಿಯಲ್ಲಿ ದಲಿತ ಸಂಘರ್ಷ ಸಮಿತಿ ಜನ್ಮಪಡೆಯಿತು. ಪ್ರೊ.ಬಿ.ಕೃಷ್ಣಪ್ಪ ಅವರ ನೇತೃತ್ವದಲ್ಲಿ ದಲಿತ ಲೇಖಕರ ಬಳಗ, ದಲಿತ ಕಲಾವಿದರ ಒಕ್ಕೂಟ, ದಲಿತ ವಿದ್ಯಾರ್ಥಿ ಒಕ್ಕೂಟಗಳು ರಚನೆಯಾದವು.

ಆಗ ಉತ್ತರ ಕರ್ನಾಟಕದಲ್ಲಿ ದೇವರಾಯ ಇಂಗಳೆ, ಕುಮಾರ ಕಕ್ಕಯ್ಯ ಪೋಳ, ಮೈಸೂರು-ಬೆಂಗಳೂರು ಕಡೆಗೆ ಸೊಸಲೇ ಸಿದ್ಧಪ್ಪ ಡಿ.ಗೋವಿಂದದಾಸ, ಜಿ.ವೆಂಕಟಯ್ಯ ಎನ್.ನರಸಿಂಹಯ್ಯ ಸಾಹಿತ್ಯ ರಚನೆಗೆ ತೊಡಗಿದರೆ ಬೀದರದಲ್ಲಿ ಬಿ. ಶಾಮಸುಂದರ,

ತ್ರಿಪುರಾಂತಿ ಮಾಸ್ತರ್, ಪಂಚಶೀಲ ಗವಾಯಿಗಳು ದಲಿತ ಸಾಹಿತ್ಯದ ಮೊದಲ ತಲೆಮಾರಿನ ಲೇಖಕರಾಗಿ ಪ್ರಚಾರ-ಪ್ರಸಾರ ಕಾರ್ಯವನ್ನು ಕೈಗೊಂಡರು. ಬೀದರದ ಹಿಲಾಲಪುರದ ಪಂಚಶೀಲ ಗವಾಯಿಗಳು ಹುಟ್ಟುಗುರುಡಾರಾದರೂ ಅವರ ಅಂತರಂಗದ ಜ್ಞಾನ ಶಕ್ತಿಯಿಂದ ಬುದ್ಧ ಬಸವ, ಅಂಬೇಡ್ಕರ್ ಚಿಂತನೆಗಳನ್ನು ಹಾಡಿನ ಮೂಲಕ ಬೀದರ ಮತ್ತು ಕಲಬುರಗಿ ಭಾಗದಲ್ಲಿ ಜನಮಾನಸಕ್ಕೆ ತಲುಪಿಸಿದರು. ಬುದ್ಧ ವಚನಾಮೃತ, ಬುದ್ಧ- ಬಸವ-ಅಂಬೇಡ್ಕರ್, ತತ್ವಜ್ಞಾನ ಅವರ ಎರಡು ಕೃತಿಗಳು. ವಿ.ಶಾಮಸುಂದರ ಹಾಗೂ ಗವಾಯಿಯವರು ದೇವರು,

ಧರ್ಮವನ್ನು ನಿರಾಕರಿಸಿ ಆ ಮೂಲಕ ತತ್ವಪದ, ಭಜನೆ ಪದ, ಕ್ರಾಂತಿ ಗೀತೆಗಳನ್ನು ರಚನೆ ಮಾಡುವ ಮೂಲಕ ಜನರಲ್ಲಿ ಹೊಸ ಸಂವೇದನೆಗಳನ್ನು ಬಿತ್ತಿದರು. ಮಾಣಿಕರಾವ್ ಜ್ಯೋತಿ ಅವರು ಭಜನೆ, ತತ್ವಪದ, ನಾಟಕದ ಮೂಲಕ ದಲಿತ ಆಶಯಗಳಿಗೆ ಉತ್ತೇಜನ ನೀಡಿದರು. ಚಂದ್ರಪ್ಪ ಹೆಬ್ಬಾಳಕರ್ ಕಾವ್ಯ ವಚನ, ಜಾನಪದ, ಚಿಂತನ, ಲೇಖನ ಸಂಕಲನ ಹೊರತಂದರು. ಎಸ್.ಎಂ.ಜನವಾಡಕರ ಕಾವ್ಯ ಕಥೆ, ನಾಟಕ, ಕಾದಂಬರಿ, ಜಾನಪದ, ಬೌದ್ಧ ಸಾಹಿತ್ಯ ಪ್ರವಾಸ ಕಥೆ,ತಥಾಗತ ಗಾಥೆಗಳ ಮಹಾ ಕಾವ್ಯ ಈಶ್ವರರಾವ್ ಕರುಣಾಸಾಗರ ಅವರು ಧಮ್ಮ ಸಂದೇಶ ಗೀತೆಗಳು, ಪ್ರಭುಶೆಟ್ಟಿ ಸೈನಿಕಾರರ ಪ್ರೇಮ ಜ್ಯೋತಿ, ಚಿಂತನ ಜ್ಯೋತಿ ಕಾವ್ಯ ಸಂಕಲನ, ಮಲ್ಲಿಕಾರ್ಜುನ ಆಮ್ದೆಯವರು ಕೆಂಪು ಸೂರ್ಯ ಮತ್ತು ಇತರ ಕವನಗಳು, ನಾನು-ನೀನು, ಮೂರು ಸಮಾಂತರ ನಾಟಕ ಪ್ರವಾಸ ಸಾಹಿತ್ಯದ ಮೂಲಕ ಹೆಸರಾದವರು. ಬಸವರಾಜ ಮಯೂರ, ಮನ್ಮಥ ಡೋಳೆ, ಮಚ್ಚೇಂದ್ರ ಅಣಕಲ್‌ರ ಕಾವ್ಯ ಕಥೆ ಭರವಸೆ ಮೂಡಿಸುತ್ತವೆ.

ಪ್ರಖರ ಕಾವ್ಯ ಶಾಹಿರಿ, ಗಜಲ್‌ಗಳಲ್ಲಿ ಸಮಾಜಮುಖಿ ಚಿಂತನೆಗಳಲ್ಲಿ ಭೀಮಸೇನ ಗಾಯಕ ವಾಡ, ಶಿವರಾಜ ಮೇತ್ರೆ, ಬಸವರಾಜ ದಯಾಸಾಗರ, ಸೂರ್ಯಕಾಂತ ಸಸಾನೆ, ಗೌತಮ ಬಕ್ಕಪ್ಪ ಚಂದ್ರಕಾಂತ ಪೋಸ್ತೆ, ಸತೀಶಕುಮಾರ ಹೊಸಮನಿ ಈಶ್ವರ ತಡೋಳಾ, ಎಂ.ಆರ್‌ಶ್ರೀಕಾಮನತ, ಶಿರೋಮಣಿ ತಾರೆ, ದಯಾಮಣಿ ರಾಜಪಗಪ, ನಿನ್ನೇಕರ್, ಗಂಧರ್ವಸೇನ, ಶಂಭುಲಿಂಗ ವಾಲ್ದೊಡ್ಡಿ ನಾಗೇಂದ್ರ ಗಾಯಕವಾಡ, ಅಶೋಕ ಎಂಬಿ.ಸುಮನ್, ಪೀರಪ್ಪ ಸಜ್ಜನ, ಮಾಯಾದೇವಿ ಗೋಖಲೆ, ಎಂ.ಎಸ್.ಮನೋಹರ, ಅಜಿತ್ ನೇಳಗೆ ಪ್ರಮುಖರು. ಯಾದಗಿರಿ ಜಿಲ್ಲೆಯಲ್ಲಿ ಕುಪೇಂದ್ರ ವಟಾರ, ಗಾಳೆಪ್ಪ ಪೂಜಾರಿ ಇದೊಂದು ಬದುಕು, ರಕ್ತ ಹೀರುವ ರಕ್ಕಸರು, ಲಿಂಗಪ್ಪ ಗೊನಾಲ, ಸಿದ್ದಪ್ಪ ಮುಷೂರು ಇವರು ಬಹುಮುಖಿ ನೆಲೆಯ ಶೋಷಣೆ ಹಿಡಿದಿಟ್ಟವರು. ಬಸವರಾಜ ಕಲೆಗಾರ ಚಿತ್ರ- ಕಾವ್ಯದ ಮೂಲಕ ದಲಿತ ಸಂವೇದನೆ ಹೊರ ಹಾಕಿದ್ದಾರೆ. ಮರಿಯಪ್ಪ ನಾಟಿಕಾರ ಈಶ್ವರ ಕಟ್ಟೀಮನಿ ಅವರು ತಮ್ಮಸಮುದಾಯದ ಭಾವನೆ ಹೊರ ಹಾಕಿದ್ದಾರೆ. ಅಶೋಕಕುಮಾರ ಮಟ್ಟಿ, ಉಮಾದೇವಿ ಮಟ್ಟಿ, ಮರೆಪ್ಪ ಇಟಗಿ, ಭೀಮರಾಯ ಲಿಂಗೇರಿ, ನಿಂಗಣ್ಣ ಕುರಕುಮದಿ,ಶಂಕರವ ಕಾವಲಿ ಮೊದಲಾದವರ ಬರಹಗಳು ಪ್ರಖರವಾಗಿವೆ. ಕಲಬುರಗಿ ಜಿಲ್ಲೆಯ ದಲಿತ ಸಾಹಿತ್ಯ ಹರವು ವಿ.ಆರ್.ಚಾಂಂಬಾಳರ ಮೂಲಕ ಆರಂಭವಾಗಿದೆ. ಭೀಮಗೀತೆ, ಭೀಮನ ಹೆಸರಿನಿಂದಲೇ ಎಲ್ಲಾ ಕಾವ್ಯ ಸಂಕಲನ ಬಂದಿವೆ. ಡಾ.ಹನುಮಂತರಾವ ದೊಡ್ಡಮನಿಯವರ ನೊಂದವರ ಹಾಡು, ಆಕ್ರೋಶ, ಪಂಚಾಯತಿ, ಸೊಲ್ಲೆತ್ತಿ ಹಾಡೇನ ಹಲವು ಕಾವ್ಯ ಜನಪರವಾಗಿವೆ. ಟಿ.ಎಂ.ಭಾಸ್ಕರ್ ಅವರ ಹೊಸದಾರಿ, ಮಾತಾಡುವ ಎಲಬುಗಳು, ನೀರ ಮೇಲಿನ ಗುಳ್ಳೆ ಅಲಗಲದೇ ಬುದ್ಧ ಭಾರತ ಮಹಾ ಕಾವ್ಯ ಬುದ್ಧ ಮತ್ತು ಬಡವರ ನೋವಿಗೆ ಮಿಡಿಯುವ ಕಾವ್ಯವಾಗಿದೆ. ಎಸ್.ಪಿ.ಸುಳ್ಳದ್ ಅವರ ರೊಚ್ಚು ಗರ್ದಿಗಮ್ಮತ್, ನೊಂದವರ ಹಾಡು ಕಾವ್ಯಗಳು ಆವೇಶ ಭರಿತ ಸೂಕ್ಷ್ಮಸಂವೇದನೆ ಹೊಂದಿವೆ. ಮಲ್ಲಿಕಾರ್ಜುನ ಕೋಟೆ, ಪ್ರಭುಲಿಂಗ ನಿಲೂರೆ, ಸಿದ್ದಣ್ಣ ಕನ್ನಡಗಿ, ಕೆ.ಎಸ್‌ಬಂಧು, ಎಚ್.ಎಸ್ಬೇನಾಳ, ಸಂತೋಷಕುಮಾರ ಕರಹರಿ, ರಾಜಕುಮಾರ ಮಾಂಗ,

ಮುಂತಾದ ಕವಿಗಳು. ಪ್ರೊ.ಎಚ್.ಟಿ.ಪೋತೆ ಅವರ ಕಥನ ಸಾಹಿತ್ಯಕ್ಕೆ ಆರು ಕಥಾಸಂಕಲನ ಐವತ್ತು ಕಥೆಗಳು, ಮೂರು ಕಾದಂಬರಿಗಳು ದಲಿತ ಮೂರು ತಲೆ ಮಾರು ಕಥೆಯಾದರೆ, ಬುದ್ಧನ ತತ್ವ ಆಧಾರಿತ, ಅಂಬೇಡ್ಕರ್ ಕುರಿತು ಮಹಾಯಾನ ವಿಭಿನ್ನ ನೆಲೆಯ ಕಾದಂಬರಿಗಳು ವೈಚಾರಿಕ, ಪ್ರವಾಸ,ಚಿಂತನ, ಮೊದಲಾದ ಪ್ರಕಾರದ ಬರಹಗಳು ದಿಕ್ಸೂಚಿಯಾಗಿವೆ.

ರಾಯಚೂರು ಜಿಲ್ಲೆಯ ದಲಿತ ಸಾಹಿತ್ಯದಲ್ಲಿ ಬೋಳ ಬಂಡೆಪ್ಪ ಚಳವಳಿ ಸಾಹಿತ್ಯ ರಚಿಸಿದರು. ದಲಿತ ದೌರ್ಜನ್ಯ ವಿರುದ್ಧ ಹೋರಾಟಗಾರ ಸೋಮಯ್ಯ ವಲ್ಲಭ, ಏಡಿಗಳು ಕಾದಂಬರಿ, ಪಾರಿವಾಳ ಕಾವ್ಯ ಆಂಜನೇಯ ಜಾಲಿಬೆಂಚಿ ಕೆಂಪು ರೆಕ್ಕೆಯ ಹಕ್ಕಿ ಕಥೆ, ಹಾಯಿಕು, ವೀರ ಹನುಮಾನರ ಕಥೆ, ಹಾಯಿಕು, ಕಾವಯ, ಹಲವು ಪ್ರಕಾರದ ವೈಶಿಷ್ಟ್ಯಕೃತಿ ರಚಿಸಿದವರು. ಬಾಬು ಭಂಡಾರಿಗಲ್ ಅವರ ಕಾವ್ಯ ವೈಚಾರಿಕ ಲೇಖನಗಳ ಸಂಕಲನ ಇಲ್ಲಿನ ಚರಿತ್ರೆ ಬಿಚ್ಚಿಡುತ್ತವೆ. ವೇಣು ಜಾಲಿಬೆಂಚಿ,

ಈರಣ್ಣ ಕೋಸಗಿ ಅವರ ಕಾವ್ಯ ಕಾದಂಬರಿ ದಮನಿತರ ಸಮುದಾಯದ ಮೇಲೆ ಮಾನವೀಯ ಮೌಲ್ಯಗಳನ್ನು ಹೊಂದಿದೆ. ತಾಯ ರಾಜ ಮರ್ಚಟನಾಳ, ಲಕ್ಷ್ಮಿರೆಡ್ಡಿ ಮಲ್ಲೇಶ ಭೈರವ್, ರಮೇಶ ಆರೋಲಿ ಭರವಸೆಯ ಲೇಖಕರು. ಅಮರೇಶ ಬಲ್ಲಿದವ, ರಾಮಣ್ಣ ಆರ್ಹೆಜ್ಯೆ ಜೆ.ಎಲ್.ಈರಣ್ಣ ವೆಂಕಟೇಶ ಬೇವಿನ ಬೆಂಚಿ, ಶರಣಪ್ಪ ಚಲವಾದಿ, ಸುರೇಶ ಬಾಬು, ಮಲ್ಲಯ್ಯ ಮೊದಲಾದವರು. ಆರ್.ಮಾಸಯ್ಯಸಿ.ದಾನಪ್ಪ ಇಬ್ಬರು ಹೋರಾಟ ಮನೋಭಾವ ಹೊಂದಿದ ಅಂತಃಸತ್ವ ಕವಿ, ಚಳವಳಿಗಾರರು. ಈ ರೀತಿಯಲ್ಲಿ ದಲಿತ ಚಳವಳಿ ಸಾಹಿತ್ಯ ಮೂಲಕ ಕಾವ್ಯ ಗಜಲ್, ಹಾಯಿಕು, ತಾಂಕಾ,ಆಧುನಿಕ ವಚನ, ಕಥೆ, ಕಾದಂಬರಿ, ಅನುವಾದ, ವಚನ, ಜಾನಪದ, ರಂಗ, ವೈಚಾರಿಕ, ಆತ್ಮಕಥನ, ನಾಟಕ, ಪ್ರಬಂಧ, ಸಂಶೋಧನೆ, ಸಂಪಾದನೆ ಮೊದಲಾದ ಕ್ಷೇತ್ರದಲ್ಲಿ ಕೃಷಿಮಾಡಿದ್ದಾರೆ.

**೨. ಪ್ರಮುಖ ಲಕ್ಷಣಗಳು**

- **ಪ್ರಾದೇಶಿಕ ಸಂವೇದನೆ ಮತ್ತು ಬವಣೆ:** ಈ ಭಾಗದ ಸಾಹಿತ್ಯವು ಕೇವಲ ಜಾತಿ ಶೋಷಣೆಯಷ್ಟೇ ಅಲ್ಲದೆ, ಗಡಿ ಪ್ರದೇಶದ ಸಮಸ್ಯೆಗಳು, ಕೃಷಿ ಕಾರ್ಮಿಕರ ಬವಣೆಗಳು, ಬರದ ದಾರುಣತೆ ಹಾಗೂ ಮೈದಾನ ಪ್ರದೇಶದ ಬದುಕಿನ ವಾಸ್ತವಿಕ ಚಿತ್ರಣವನ್ನು ಕಟ್ಟಿಕೊಟ್ಟಿದೆ
- **ನಿಜಾಮರ ಆಳ್ವಿಕೆಯ ವಿರೋಧ:** ಈ ಮಣ್ಣಿನ ಬಂಡಾಯ ಸಾಹಿತ್ಯವು ಹೈದರಾಬಾದ್ ನಿಜಾಮರ ದಬ್ಬಾಳಿಕೆ, ರಜಾಕಾರರ ದೌರ್ಜನ್ಯ ಹಾಗೂ ಸ್ವಾತಂತ್ರ್ಯ ಹೋರಾಟದ ಐತಿಹಾಸಿಕ ನೆನಪುಗಳನ್ನು ಒಳಗೊಂಡಿದೆ.
- **ಅಂಬೇಡ್ಕರ್ ಮತ್ತು ಸಮಾಜವಾದಿ ಚಿಂತನೆ:** ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯಗಳು ಮತ್ತು ಸಮಾಜವಾದಿ ಚಿಂತನೆಗಳು ಈ ಸಾಹಿತ್ಯದ ಪ್ರಮುಖ ಪ್ರೇರಣೆಯಾಗಿವೆ. ದಲಿತರನ್ನು ಸಂಘಟಿಸುವ ಮತ್ತು ಸ್ವಾವಲಂಬನೆಯ ಪಾಠ ಕಲಿಸುವ ಸಾಹಿತ್ಯಿಕ ಪ್ರಯತ್ನಗಳು ಇಲ್ಲಿ ನಡೆದಿವೆ.
- **ಜಾತಿ ವ್ಯವಸ್ಥೆಯ ವಿಮರ್ಶೆ:** ಮೇಲ್ವರ್ಗದ ಸಾಹಿತ್ಯಿಕ ಮೌಲ್ಯಗಳನ್ನು ಪ್ರಶ್ನಿಸಿ, ದಲಿತರ ಮತ್ತು ಶ್ರಮಿಕರ ದೈನಂದಿನ ಆಡುಭಾಷೆ, ನಂಬಿಕೆಗಳು ಹಾಗೂ ಸಂಸ್ಕೃತಿಯನ್ನು ಸಾಹಿತ್ಯದ ಮುಖ್ಯವಾಹಿನಿಗೆ ತರಲಾಯಿತು.
- **ಮಹಿಳಾ ದನಿಗಳು:** ದಲಿತ ಹಾಗೂ ಬಂಡಾಯ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಪ್ರಮುಖವಾಗಿದ್ದು, ಪಿತೃಪ್ರಭುತ್ವ ಮತ್ತು ಜಾತಿ ಪದ್ಧತಿಯಿಂದ ಮಹಿಳೆಯರು ಅನುಭವಿಸುತ್ತಿರುವ ದ್ವಿಮುಖ ಶೋಷಣೆಯನ್ನು ಬಿಂಬಿಸಲಾಗಿದೆ.

**೩. ಕೊನೆಯ ಮಾತು:**

ಹೀಗೆ ದಲಿತ ಮತ್ತು ಬಂಡಾಯ ಸಾಹಿತ್ಯವು ಅಂದು ಕಲ್ಯಾಣ ಕರ್ನಾಟಕದ ಇಂದಿನ ಹೈದರಾಬಾದ್-ಕರ್ನಾಟಕ ಸೇರಿದಂತೆ ದಲಿತ-ಬಂಡಾಯ ಸಾಹಿತ್ಯವು ಪ್ರಾದೇಶಿಕ ಅಸಮಾನತೆ, ಹರಿಯುತ್ತಿರುವ ಜೀವನದಿಯಾಗಿದೆ. ಇದು ಕಾಲದ ದಡಗಳಲ್ಲಿ ಕೆಲವೊಮ್ಮೆ ಕಿರಿದಾಗಿ, ಮತ್ತೂ ಕೆಲವೊಮ್ಮೆ ಹಿರಿದಾಗಿ ಹರಿದದ್ದಿದೆ. ಈ ಮೂಲಕ ಇದು ಬತ್ತದ ಸೆಲೆ ಮತ್ತು ನಿತ್ಯನೂತನ ದೇಹಿ ಎಂಬ ಸತ್ಯ ಭವಿಷ್ಯಕ್ಕೆ ಚಾಚುವ ಆಶಾಚುಕ್ಕಿಯಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಕನ್ನಡ ಸಾಹಿತ್ಯ ಪುನ್ರ್ ಮೌಲ್ಲವೀಕರಣ್ - ಸಂ. ಬರಗೂರುರಾಮಚಂದೆಪಪ , ಸಾಹಿತ್ಯ ಅಕಾಡರಮಿ , ಸಂಚಿಕರ 1 ರಿಂದ 12 ರ ವರೆಗೆ.
2. ಅರವಿಂದ ಮಾಲಗತ್ತಿ, (1994), ಕನ್ನಡ ಕಾವ್ಯದಲ್ಲಿ ದಲಿತ ಧ್ವನಿಗಳು, ಮೈಸೂರು: ವಿಚಾರವಾದಿ ಪ್ರಕಾಶನ.
3. ಶಿವರುದ್ರಪ್ಪ ಜಿ.ಎಸ್. (ಸಂ), (1989), ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
4. ಲೋಕಾಪುರ ಎಸ್.ಎಂ., (1999), ಕನ್ನಡ ದಲಿತ ಕಾವ್ಯ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
5. ಜಗದೀಶ್ ಬಾಬು ಬಿ.ವಿ., (2009), ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಬಂಡಾಯ ಮನೋಧರ್ಮ: ಒಂದು ಅಧ್ಯಯನ, ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.
6. ಮೊಗಳ್ಳಿ ಗಣೇಶ್, (2002), ದಲಿತ ಚಿಂತನೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
7. ದೇವಯ್ಯ ಹರವೆ, (1991), ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
8. ಜವರಯ್ಯ ಮ.ನ., (1994), ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ, ಮೈಸೂರು: ಸಿದ್ಧಾರ್ಥ ಗ್ರಂಥಮಾಲೆ.
9. ಬರಗೂರು ರಾಮಚಂದ್ರಪ್ಪ, (1991), ಬಂಡಾಯ ಸಾಹಿತ್ಯ ಮೀಮಾಂಸೆ, ಬೆಂಗಳೂರು: ಅನ್ವೇಷಣೆ ಪ್ರಕಾಶನ.
10. ಬಸವರಾಜ ಸಬರದ, (1992), ಬಂಡಾಯ ಸಾಹಿತ್ಯ ಮೀಮಾಂಸೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
11. ಪುರುಷೋತ್ತಮ ಬಿಳಿಮಲೆ, (1990), ಬಂಡಾಯ-ದಲಿತ ಸಾಹಿತ್ಯ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.